O.S.No.113/2014

PW-2

ಇಂದು ದಿನಾಂಕಃ18-08-2015 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃಶ್ರೀ.ಎಸ್.ಕೆ.ಎಚ್. 4 ನೇ ಪ್ರತಿವಾದಿ ಪರ ವಕೀಲರಿಂದ.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ವಾದಿ ಅಂಬವ್ವ ಇವರ ಜಮೀನು ನಮ್ಮ ಜಮೀನಿಗೆ ಹೊಂದಿಕೊಂಡಿರುತ್ತದೆ. ದಾವಾ ಜಮೀನನ್ನು 4 ನೇ ಪ್ರತಿವಾದಿ ಖರೀದಿ ಮಾಡಿರುತ್ತಾನೆಂದು ನನಗೆ ಉತಾರ ನೋಡಿದ ನಂತರ ತಿಳಿದಿರುತ್ತದೆ. 4 ನೇ ಪ್ರತಿವಾದಿ ದಾವಾ ಜಮೀನನ್ನು ಖರೀದಿ ಮಾಡಿದ ನಂತರ ದಾವಾ ಜಮೀನಿನಲ್ಲಿ ಬೊರೆವಲ್ ಮತ್ತು ವಿದ್ಯುತ್ ಸಂಪರ್ಕ ಮಾಡಿಸಿರುತ್ತಾನೆಂದರೆ ಸರಿ ಅಲ್ಲ. ವಾದಿಯು 4 ನೇ ಪ್ರತಿವಾದಿಯವರ ಮೇಲೆ ದಾವೆ ಮಾಡಿರುತ್ತಾರೆ. ವಾದಿಗೆ ತೇರದಾಳ ಮತ್ತು ಮದರಕಂಡಿಯಲ್ಲಿ ಮತ್ತು ಮುಗಳಖೋಡದಲ್ಲಿ ದಾವಾ ಜಮೀನನ್ನು ಬಿಟ್ಟು ಬೇರೆ ಯಾವ ಜಮೀನು ಇಲ್ಲ ಎಂಬ ವಿಷಯ ನನಗೆ ಹೇಗೆ

O.S.No.113/2014

PW-2

ತಿಳಿದಿರುತ್ತದೆ ಎಂದರೆ ಸಾಕ್ಷಿಯು ನಾವು ಅಕ್ಕಪಕ್ಕದವರ ಜಮೀನದವರಾಗಿದ್ದರಿಂದ ವಾದಿಯವರ ಆಸ್ತಿಯ ಬಗ್ಗೆ ತಿಳಿದಿರುತ್ತದೆ ಎಂದು ನುಡಿದಿರುತ್ತಾರೆ. ವಾದಿ ಮತ್ತು 1 ರಿಂದ 3 ನೇ ಪ್ರತಿವಾದಿಯವರ ಮಧ್ಯೆ ಆಸ್ತಿ ವಾಟ್ನಿ ಆಗಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ವಾಟ್ನಿಯಲ್ಲಿ ಪ್ರತಿವಾದಿ 1 ರಿಂದ 3 ಇವರಿಗೆ ದಾವಾ ಆಸ್ತಿ ಬಂದಿರುತ್ತದೆ ಎಂದರೆ ಸರಿ ಅಲ್ಲ. ಹಾಗೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ. 1 ನೇ ಪ್ರತಿವಾದಿಗ ದಾವಾ ಆಸ್ತಿ ಬಂದಿದ್ದರಿಂದ 4 ನೇ ಪ್ರತಿವಾದಿಗೆ ಸದರಿ ಆಸ್ತಿಯನ್ನು ಮಾರಾಟ ಮಾಡಿರುತ್ತಾನೆ ಎಂದರೆ ಸರಿ ಅಲ್ಲ. ದಾವಾ ಆಸ್ತಿಯಲ್ಲಿ 4 ನೇ ಪ್ರತಿವಾದಿ ಜಮೀನಿನಲ್ಲಿ ಕಬ್ಬು ಬೆಳೆ ಬೆದಿರುತ್ತಾನೆ ಎಂದರೆ ಸರಿ ಅಲ್ಲ. ವಾಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ವಾದಿಗೆ ದಾವಾ ಜಮೀನಿನಲ್ಲಿ ಯಾವುದೇ ಹಕ್ಕು ಇರದಿದ್ದರೂ ಸಹ 4 ನೇ ಪ್ರತಿವಾದಿ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ಈ ದಾವೆಯ ಮಾಹಿತಿ ಇಲ್ಲದಿದ್ದರೂ ಸಹ ವಾದಿಯ ಮಾತನ್ನು ಕೇಳಿಕೊಂಡು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿ ಅಲ್ಲ.

1 ರಿಂದ 3 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/-

ಜೆ ಎಂ ಎಫ್ ಸಿ ಜಮಖಂಡಿ.

ಸಾಕ್ಷಿಯ ಸಹಿ,